# 3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

# Spl. C. No. 23/2014

| | | |
|---|---|---|
| ಹೆಸರು | ಸಣ್ಣತಿಮ್ಮಯ್ಯ | ಪ್ರಾಸಾ.6 |
| ತಂದೆಯ ಹೆಸರು | ಲೇ ದೊಡ್ಡ ಜುಂಜಯ್ಯ | ಚಾಸಾ.3 |
| ವಯಸ್ಸು | 65 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ | ಸಂಪಿಗೆ ಹೊಸಹಳ್ಳಿ ಗೊಲ್ಲರ ಹಟ್ಟಿ | |

**ದಿನಾಂಕಃ 03.02.2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

## IN CAMERA PROCEEDINGS

**ಮುಖ್ಯ ವಿಚಾರಣೆ : ಮಾನ್ಯ ಎಸ್.ಪಿ.ಪಿ ರವರಿಂದಃ**

ಆರೋಪಿಗಳು ಗೊತ್ತು. ನಾನು ಯಾವುದೇ ಘಟನೆ ನೋಡಿಲ್ಲ. ಚಾಸಾ.6 ರವರು ಗೊತ್ತು. ನಮ್ಮ ಪಕ್ಕದಲ್ಲಿ ಇದ್ದಾರೆ. ಗಲಾಟೆ ಆದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣದಲ್ಲಿ ಪೊಲೀಸರಿಗೆ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲು ಮಾಡಲು ಎಸ್‌ಪಿಪಿರವರು ಅನುಮತಿ ಕೋರಿದ್ದು , ಸಾಕ್ಷಿಯ ಕಲಂ 161 ರ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎಸ್.ಪಿ.ಪಿ ರವರಿಂದ.**

ಬಿಸಿ ಕಾವಲ್ ನ ಸರ್ವೆಂ ನಂಬರ್ 158 ರಲ್ಲಿ ಚಾಸಾ.6 ರವರ ಜಮೀನು ಇದೆ ಎಂದರೆ ಸರಿ. ಸಾಕ್ಷಿ ಸರ್ವೆ ನಂಬರ್ 157 ನನ್ನ ಸರ್ವೆ ನಂಬರ್ ಎಂದು ನುಡಿಯುತ್ತಾರೆ. ಚಾಸಾ.6 ರವರ ಜಮೀನಿನಲ್ಲಿ ಸ್ವಲ್ಪ ತೆಂಗಿನ ಗಿಡಗಳು ಇವೆ. ಚಾಸಾ.1 ರವರು ಸದರಿ ಜಮೀನನ್ನು ಗುತ್ತಿಗೆಗೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಾಸಾ.1 ರವರು ತೋಟದಲ್ಲಿ ಬೇರೆ ಬೆಳಗಳನ್ನು ಬೆಳೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಿಃ 04.08.13 ರಂದು ನಾನು ತೋಟದಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. 1 ರಿಂದ 4 ನೇ ಆರೋಪಿಗಳು ಚಾಸಾ.6 ರವರ ಜಮೀನಿಗೆ ಹೋಗಿ ಅಕ್ರಮವಾಗಿ ರೋಟಿಯಿಂದ ತೆಂಗಿನ ಕಾಯಿ ಕೀಳುತ್ತಿದ್ದರು ಎಂದರೆ ಸರಿಯಲ್ಲ. ಆಗ ಚಾಸಾ.1 ರವರು ಈ ಬಗ್ಗೆ ಪ್ರಶ್ನಿಸಿದ್ದಾರೆ ಎಂದರೆ ಸರಿಯಲ್ಲ. ಆಗ ಆರೋಪಿಗಳು ಚಾಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಮಾದಿಗ ನನ್ನ ಮಗನೇ ಎಂದು ಜಾತಿ ನಿಂದನೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ತನ್ನ ಕೈ ಯಿಂದ ಚಾಸಾ.1 ರವರ ಎದೆಯ ಬಲಭಾಗ ಮತ್ತು ಎಡಭಾಗಕ್ಕೆ ಗುದ್ದಿದಾಗ ಚಾಸಾ.1 ರವರು ಕೆಳಕ್ಕೆ ಬಿದ್ದರು ಎಂದರೆ ಸರಿಯಲ್ಲ. 2 ರಿಂದ 4 ನೇ ಆರೋಪಿಗಳು ಚಾಸಾ.1 ರವರ ಹೊಟ್ಟೆ ಮತ್ತು ಎರಡು ಕಾಲಿನ ಮಂಡಿಗಳಿಗೆ ಒದ್ದು, ನೋವು ಉಂಟುಮಾಡಿದ್ದಾರೆ ಎಂದರೆ ಸರಿಯಲ್ಲ. ಚಾಸಾ.4 ರವರ ತೋಟ ಪಕ್ಕದಲ್ಲಿ ಇದೆ ಎಂದರೆ ಸರಿ. ಆಗ ನಾನು , ಚಾಸಾ.2, 4 ಮತ್ತು ಚಾಸಾ.5 ವರುಗಳು ಜಗಳಬಿಡಿಸಿದೆವು ಎಂದರೆ ಸರಿಯಲ್ಲ. 8 ನೇ ತಿಂಗಳು ಮಳೆಗಾಲ ಎಂದರೆ ನನಗೆ ಗೊತ್ತಿಲ್ಲ. ನಾನು ದಿನಾ ತೋಟದ ಬಳಿಗೆ ಕಾಯಿ ಬಿದ್ದಿರುವುದನ್ನು ನೋಡಲು ಹೋಗುತ್ತೇನೆ ಎಂದರೆ ಸರಿಯಲ್ಲ. ಚಾಸಾ.1 ರವರನ್ನು ಚಾಸಾ.2 ರವರು ನಂತರ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದರೆ ಸರಿಯಲ್ಲ. ದಿಃ 08.08.13 ರಂದು ಚಾಸಾ.17 ರವರು ನಿಪಿ.3 ರಂತೆ ನನ್ನ ಹೇಳಿಕೆ ದಾಖಲಿಸಿಕೊಂಡಿದ್ದರೂ, ನನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರಕರಣದ ಪ್ರತ್ಯಕ್ಷದರ್ಶಿ ಆಗಿದ್ದರೂ ಆರೋಪಿತರಿಗೆ ಶಿಕ್ಷೆ ತಪ್ಪಿಸಲು ಸುಳ್ಳು ಸಾಕ್ಷಿನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದ.**

ನನ್ನ ಜಮೀನಿನ ಉತ್ತರ ಭಾಗಕ್ಕೆ 1 ನೇ ಆರೋಪಿಯ ಮನೆ ಇದೆ ಎಂದರೆ ಸರಿ.

## ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ

3ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.